ಮನೆಯ ಹಿಂಡುವ ಎಮ್ಮೆಯನ್ನು ಮೇಯಿಸಿಕೊಂಡು ಬರಲು ಸಹ ಒಮ್ಮೊಮ್ಮೆ ಹೋಗುತ್ತಿದ್ದಳು. ದಿನವೂ ಸೊಸೆ ವಿಜಯಮ್ಮನು ಆ ಕೆಲಸ ಮಾಡುತ್ತಿದ್ದಳು. ಚಿಕ್ಕಮ್ಮ ಯಾವಾಗಲೂ ಒಂದೋ ಎರಡೋ ಚೀಟಿಗಳನ್ನು ಹಾಕಿಕೊಂಡಿರುತ್ತಿದ್ದಳು. ಹತ್ತಿಪ್ಪತ್ತು ಸಾವಿರ ರೂಪಾಯಿಗಳ ಚೀಟಿಗಳವು. ಹಾಕಿಕೊಂಡ ಚೀಟಿಗೆ ಬಡ್ಡಿ ಚೀಟಿಗಳೇನಾದರೂ ಬಂದರೆ ಚಿಕ್ಕಮ್ಮನ ಮನೆಯಲ್ಲಿ ಕೋಳಿ ಊಟ ಗ್ಯಾರಂಟಿ ಇರುತ್ತಿತ್ತು.

ಅವರ ಮನೆಯಿಂದ ಸ್ವಲ್ಪ ದೂರದಲ್ಲಿ ಮುಖ್ಯ ರಸ್ತೆಯ ಪಕ್ಕದಲ್ಲಿ ಒಂದು ಮಠವಿತ್ತು. ಅದರಾಚೆ ಒಂದು ದರ್ಗಾ ಇತ್ತು. ಚಿಕ್ಕಮ್ಮನ ಮನೆಯವರು ಎರಡೂ ಪವಿತ್ರವೆಂದು ನಡೆದುಕೊಳ್ಳುತ್ತಿದ್ದರು. ಮಠದಲ್ಲಿ ಪೂಜೆಯಾದಾಗ ಪ್ರಸಾದ ಸೇವಿಸುತ್ತ, ದರ್ಗಾದಲ್ಲಿ ವಾರಕ್ಕೊಮ್ಮೆ ಕಲ್ಲು ಸಕ್ಕರೆ, ಉತ್ತುತ್ತಿ ತಿನ್ನುತ್ತ ತಮ್ಮ ನೇಮ ನಿಷ್ಠೆಯನ್ನು ಎರಡೂ ಕಡೆ ಇಟ್ಟುಕೊಂಡಿದ್ದರು. ಹೀಗೆ ಸಾಲಸೋಲ ಮಾಡದೆ ಜೀವನ ಸಾಗಿಸುತ್ತಿದ್ದರು.

ಇದನ್ನು ಲೋನ್ಲಿಂಗ ಬಲ್ಲವನಾಗಿದ್ದ. ತನ್ನ ಏರಿಯಾದಲ್ಲಿ ಯಾರ್‍ಯಾರು ಯಾವ್ಯಾವ ಸಾಲಗಳನ್ನು ಪಡೆದಿದ್ದಾರೆ, ಅದರಲ್ಲಿ ಯಾರು ಯಾವ ಥರ ಮೋಸ ಮಾಡಿ ಯೋಜನೆಗಳ ದುರ್ಬಳಕೆ ಮಾಡಿಕೊಂಡಿದ್ದಾರೆ, ಮೋಸದಲ್ಲಿ ಯಾರ್‍ಯಾರ ಕೈವಾಡವಿದೆ ಮುಂತಾದ ವಿವರಗಳನ್ನು ಗುಪ್ತವಾಗಿ ತಿಳಿದುಕೊಂಡಿರುತ್ತಿದ್ದ. ಅಂಥ ಲಿಂಗ ಚಿಕ್ಕಮ್ಮನ ಮನೆಗೆ ಒಂದು ದಿನ ಬಂದವನೇ ಚಿಕ್ಕಮ್ಮನಿಗೆ ಸೀಮೆಹಸು ಸಾಲದ ಯೋಜನೆ ಬಗ್ಗೆ ವಿವರಿಸಿದ. 'ಈ ಯೋಜನೆಯಲ್ಲಿ ಒಂದು ಲಕ್ಷದ ಇಪ್ಪತ್ತೈದು ಸಾವಿರ ಮಂಜೂರಾಗುತ್ತದೆ. ಆ ದುಡ್ಡಿಗೆ ಎರಡು ಮಜಬೂತಾದ ಸೀಮೆಹಸು ಕೊಡುಸ್ತಾರೆ. ಮೂವತ್ತೊಂದು ಸಾವಿರ ಸಹಾಯಧನವಿರುತ್ತದೆ. ಮಿಕ್ಕ ತೊಂಬತ್ನಾಲ್ಕು ಸಾವಿರ ರೂಪಾಯಿಗಳನ್ನು ಮಾತ್ರ ಸಾಲವಾಗಿ ಐದು ವರ್ಷದಲ್ಲಿ ತೀರಿಸಬೇಕಾಗುತ್ತದೆ. ಅಷ್ಟರಲ್ಲಿ ಸಾಲಮನ್ನಾ ಆದರೆ ಎಲ್ಲ ನಿನ್ನದೇ' ಎಂದ. ಅಷ್ಟೊಂದು ದುಡ್ಡನ್ನು ಎಂದೂ ಕಂಡಿರದ, ಕೇಳಿರದ ಚಿಕ್ಕಮ್ಮ ಮತ್ತು ಲೋಕಿ ಇಬ್ಬರೂ ಅದು ತಮ್ಮ ಕಡೆ ಪುಗಸಟ್ಟೆ ಹರಿದು ಬರುವುದನ್ನು ಊಹಿಸಿಯೇ ಆಶ್ಚರ್ಯ ವ್ಯಕ್ತಪಡಿಸುತ್ತ ದಂಗಾಗಿ ಕುಳಿತುಬಿಟ್ಟರು.

'ಏನೇನು ರೆಕಾರ್ಡ್ಸ್ ಕೊಡಬೇಕಣ್ಣ ಅದ್ಕೆ' ಅಂದಳು ಚಿಕ್ಕಮ್ಮ.

'ನೀನೇನು ಯೋಚ್ನೆ ಮಾಡ್ಬೇಡ. ಎಲ್ಲವನ್ನೂ ನಾನು ರೆಡಿ ಮಾಡ್ತೀನಿ. ನೀನು ಬ್ಯಾಂಕಲ್ಲಿ ಒಂದು ಅಕೌಂಟ್ ಓಪನ್ ಮಾಡು ಸಾಕು' ಅಂದ ಲೋನ್ಲಿಂಗ.

ಅಲ್ಲಿಂದ ಹದಿನೈದು ದಿನಗಳ ಕಾಲ ಎಲ್ಲ ಕೆಲಸ ಬಿಟ್ಟು ಚಿಕ್ಕಮ್ಮ ಅನೇಕ ಸರ್ಕಾರಿ ಕಚೇರಿಗಳನ್ನು, ಬ್ಯಾಂಕ್‌ಗಳನ್ನು ಸುತ್ತುತ್ತ ಕಾಲ ಕಳೆಯಬೇಕಾಯಿತು. ಅಷ್ಟೂ ದಿನ ಒಂದು ಪೈಸೆಯನ್ನೂ ದುಡಿಯಲಾಗಲಿಲ್ಲ. ಸಬ್ಸಿಡಿ ಹಣದ ಜಪ ಮಾಡುತ್ತ ಲೋಕಿಯು ಸರಿಯಾಗಿ ಕೆಲಸ ಮಾಡದೆ ದಿನಗಳನ್ನು ವ್ಯರ್ಥವಾಗಿ ಕಳೆದ. ಇಷ್ಟು ವರ್ಷ ಇಂಥ ಸಾಲಗಳಿಗೆ ಪ್ರಯತ್ನಿಸದ ಬಗ್ಗೆ ಅವನಿಗೆ ಪಶ್ಚಾತ್ತಾಪವಾಯಿತು.

ಹಸು ಸಾಲದ ಬಗ್ಗೆ ಏರ್ಪಡಿಸಿದ್ದ ಗ್ರಾಮಸಭೆಗೆ ಚಿಕ್ಕಮ್ಮನಾಗಲಿ, ಲೋಕಿಯಾಗಲಿ ಹಾಜರಾಗಿರಲಿಲ್ಲವೆಂದು ತಕರಾರೆತ್ತಿದ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ. ಏನಾರ ಕೊಡ್ತೀವಿ ಅಂದ ಲೋಕಿ. ಆಫೀಸರ್ ಸಿಟ್ಟುಸಿಟ್ಟಾಗಿ ತಾನು ಲಂಚ ತಿನ್ನುವ ಅಧಿಕಾರಿಯಲ್ಲವೆಂದು ಕೂಗಾಡಿದ. ಇಂಥ ಆಟಗಳನ್ನು ಬಲ್ಲ ಲೋನ್ಲಿಂಗ ಏನೂ ಮಾತಾಡದೆ ಚಿಕ್ಕಮ್ಮ, ಲೋಕಿಯರನ್ನು ಕರೆದುಕೊಂಡು ವಾಪಸ್ ಬಂದ. ಅದೇ ದಿನ ರಾತ್ರಿ ಲೋನ್ಲಿಂಗನು ಕಾರ್ಯದರ್ಶಿ ಜೊತೆ ಗುಟ್ಟಾಗಿ ಮಾತಾಡಿ ವ್ಯವಹಾರ ಕುದುರಿಸಿದನು. ಅದರ ಪ್ರಕಾರ ಚಿಕ್ಕಮ್ಮ ಕೋಂ ತಿಮ್ಮರಾಯಪ್ಪ ಸೋಪನಹಳ್ಳಿ ಹೆಸರನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡಲಾದ ಫಲಾನುಭವಿಗಳ ಪಟ್ಟಿಯಲ್ಲಿ ಸೇರಿಸಿ ಆಯ್ಕೆ ಮಾಡಲು